# ನವಿಲುಗನ್ನಡಿ

- ನವೆಂಬರ್ ಸಂಚಿಕೆಯಲ್ಲಿ ಕುಮಾರಚಲ್ಯ ಅವರ ಲೇಖನ 'ಕರ್ಣಾಟಕ ಕಾದಂಬರಿ: ಒಂದು ಅಮರ ಪ್ರೇಮ ಕಾವ್ಯ' (ನಿಚ್ಚಂ ಪೊಸತು) ಓದುತ್ತಿದ್ದಂತೆ ನಾಗವರ್ಮನ ಕಾವ್ಯದ ಚಿತ್ರಣ ಕಣ್ಣೆದುರಿಗೆ ಮೂಡಿತು. ಜನ್ಮಾಂತರದ ಕತೆಯನ್ನು ಸರಳವಾಗಿ ಬಿಡಿಸಿಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

**ಆಶಾ, ಶಿವಮೊಗ್ಗ**

- ಕತೆಗಾರ್ತಿ ಎಂ.ಎಸ್. ವೇದಾ ಅವರ ಸಂದರ್ಶನ 'ನೆಲದಲ್ಲಿ ಹರಡಿನಿಂತ ಗಟ್ಟಿಬೇರಿನ ಪ್ರಶ್ನೆಗಳು' ಅರ್ಥಪೂರ್ಣ. ಪ್ರೀತಿ ನಾಗರಾಜ ಅವರು ಈ ಸಂದರ್ಶನದಲ್ಲಿ ವೇದಾರ ಸಾಹಿತ್ಯ ಪಯಣವನ್ನು ಆಪ್ತವಾಗಿ ತೆರೆದಿಟ್ಟಿದ್ದಾರೆ.

**ಚಿದಾನಂದ ಎಂ., ವಿಜಯಪುರ**

- ಮಲ್ಲಿಕಾರ್ಜುನ ಹುಲಗಬಾಳಿ ಅವರ ಲಲಿತ ಪ್ರಬಂಧ 'ಹಾಗೇ ಸುಮ್ಮನೆ...' ಆಸಕ್ತಿ ಕೆರಳಿಸುವಂತಿತ್ತು. 'ನಂದಾದೀಪ'ದಲ್ಲಿ ವಿಮರ್ಶಕ ಜಿ.ಎಸ್. ಆಮೂರರ ಕುರಿತ ಎಚ್.ಎಸ್. ರಾಘವೇಂದ್ರ ರಾವ್, ಎಂ.ಜಿ. ಹೆಗಡೆ ಅವರ ಲೇಖನಗಳು ಹೃದಯಸ್ಪರ್ಶಿಯಾಗಿವೆ.

**ಗುರುನಾಥ ಸುತಾರ ಹುಲ್ಯಾಳ, ಜಮಖಂಡಿ**

- ಪ್ರೊ. ಜಿ.ಎಸ್. ಆಮೂರ ಅವರನ್ನು ಕುರಿತು ನಾನು ಬರೆದಿರುವ ಲೇಖನ(ಮುಗಿದ ಪಯಣ–ಮುಗಿಯದ ಹುಡುಕಾಟ) ದಲ್ಲಿ 'ಲೋಕಯಾತ್ರೆ' ಎಂಬ ಪುಸ್ತಕದ ಹೆಸರನ್ನು ತಪ್ಪಾಗಿ 'ಭಾರತಯಾತ್ರೆ' ಎಂದು ಬರೆದಿದ್ದೇನೆ. ಈ ಪ್ರಮಾದಕ್ಕೆ ವಿಷಾದಿಸುತ್ತೇನೆ.

**ಎಚ್.ಎಸ್. ರಾಘವೇಂದ್ರರಾವ್, ಬೆಂಗಳೂರು**




- ಕೇಶವರೆಡ್ಡಿ ಹಂದ್ರಾಳರ 'ಇನ್ನಾದರೂ ಸಾಯಬೇಕು' ನೀಳ್ಗತೆ ವಾಸ್ತವಕ್ಕೆ ಹತ್ತಿರವಾಗಿದೆ. ಪಿಎಚ್.ಡಿ. ವಿದ್ಯಾರ್ಥಿಗಳ ಅನಿವಾರ್ಯ ಕರ್ಮಗಳನ್ನು ಕತೆ ಸೊಗಸಾಗಿ ತೆರೆದಿಟ್ಟಿದೆ. ಅನೇಕ ತಿರುವುಗಳ ಈ ಕತೆ ಮನಸನ್ನು ಕದಡುವಂತಿತ್ತು.

**ಮುರಳಿ, ನಾಗವಾರ**

- ಸಂಧ್ಯಾ ಹೊನಗುಂಟಿಕರ್ ಅವರ 'ಕಾಡುವ ಕನ್ನಡಿ ಮಚ್ಚೆ' ಕತೆ ಕುತೂಹಲಕಾರಿಯಾಗಿದೆ. ದೀಪಾ ಫಡ್ಕೆ ಅವರ 'ಉಳಿಕೆ' ಕತೆ ಹೊಸ ಆಲೋಚನೆ, ಹೊಸ ಶೈಲಿಯ ಕಥಾನಕದಿಂದ ಗಮನ ಸೆಳೆಯುತ್ತದೆ.

**ಪ್ರಭಾಕರ ಮ. ನಿಂಬರಗಿ, ಕಲಬುರಗಿ**

- 'ಮಮ್ಮುಮುಕ್ರಿ' (ಮೂಲ: ಶಿಹಾಬುದ್ದೀನ್ ಪೊಯ್ತುಂಕಡವು, ಕನ್ನಡಕ್ಕೆ: ಸುನೈಫ್) ಕತೆಯಲ್ಲಿನ ಕೆಲವು ಪದಗಳು ಸಾಮಾನ್ಯ ಓದುಗರಿಗೆ ಅರ್ಥವಾಗುವಂತಿರಲಿಲ್ಲ. ಇದು ಕತೆಯ ಸರಾಗ ಓದಿಗೆ ತೊಡಕನ್ನುಂಟು ಮಾಡುತ್ತದೆ.

**ಸಿ.ಆರ್. ಶ್ರೀನಿವಾಸ, ಬೆಂಗಳೂರು**